ಶ್ರೀ ಯು.ಆರ್.ಸಭಾಪತಿ: ನಾನು ಕೇಳಿದ ಪ್ರಶ್ನೆಗೆ 515 ಮಸೀದಿಗಳಿಗೆ ವಕ್ಫ್ ಮಂಡಳಿಯಿಂದ ಹಣವನ್ನು ಮಂಜೂರು ಮಾಡಲಾಗಿದೆಯೆಂದು ತಿಳಿಸಿದ್ದಾರೆ. 1997-98ನೇ ಸಾಲಿನಲ್ಲಿ ಎಷ್ಟು ಹಣವನ್ನು ಬಿಡುಗಡೆಗೊಳಿಸಿದ್ದೀರಿ? ಈ ಹಣವನ್ನು ಸರ್ಕಾರದ ಯಾವ ಮಾನದಂಡದ ಪ್ರಕಾರ ವಿತರಣೆ ಮಾಡಿದೆ ಎಂಬ ಬಗ್ಗೆ ಉತ್ತರಿಸಬೇಕೆಂದು ಕೇಳುತ್ತೇನೆ.

ಶ್ರೀ ಆರ್.ರೋಷನ್ ಬೇಗ್: ಈ ವರ್ಷದಲ್ಲಿ ಸುಮಾರು ಒಂದೂವರೆ ಕೋಟಿ ರೂಪಾಯಿಗಳನ್ನು ಸುಮಾರು 515 ಮಸೀದಿಗಳಿಗೆ ನಾವು ಬಿಡುಗಡೆ ಮಾಡಿದ್ದೇವೆ. ಡೀಟೇಲಾದ ಪಟ್ಟಿ ಕೊಡುತ್ತೇನೆ. ಎಲ್ಲೆಲ್ಲಿ ಈ ತರಹದ ಮೆಂಟೆನೆನ್ಸ್ ಮತ್ತು ರಿಪೇರ್ಸ್‌ಗಾಗಿ ನಮ್ಮನ್ನು ಎಷ್ಟೆಷ್ಟು ಹಣವನ್ನು ಕೇಳುತ್ತಾರೋ, ನಾವು ಅವರಿಗೆ ಅಷ್ಟಷ್ಟು ಹಣವನ್ನು ಬಿಡುಗಡೆ ಮಾಡುತ್ತೇವೆ.

ಶ್ರೀ ಯು.ಆರ್.ಸಭಾಪತಿ: 50 ಲಕ್ಷ ಹಣ ಉಳಿದಿದೆ ಎಂದು ಹೇಳಿದ್ದಾರೆ. ಸರ್ಕಾರದ ಮುಂದೆ ವಿಲೇವಾರಿಯಾಗಲಿಕ್ಕೆ ಇರತಕ್ಕ ಅರ್ಜಿಗಳ ಸಂಖ್ಯೆ ಎಷ್ಟು? ಇದರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಿಂದ ಬಂದ ಅರ್ಜಿಗಳ ಸಂಖ್ಯೆ ಎಷ್ಟೆಂದು ತಿಳಿಸಬೇಕೆಂದು ಕೇಳುತ್ತೇನೆ.

ಶ್ರೀ ಆರ್.ರೋಷನ್‌ಬೇಗ್: ದಕ್ಷಿಣ ಕನ್ನಡ ಜಿಲ್ಲೆಯ ಕುರಿತು ಸೆಪರೇಟ್ ಆಗಿ ಕೇಳಿರಲಿಲ್ಲ. ನಂತರ, ಆ ಮಾಹಿತಿ ಒದಗಿಸುತ್ತೇನೆ. ಎಲೆಕ್ಷನ್ ನೋಟಿಫಿಕೇಷನ್ ಬಂದಿದ್ದರಿಂದ 50 ಲಕ್ಷ ರೂಪಾಯಿ ಬಿಡುಗಡೆ ಮಾಡುವುದಕ್ಕಾಗಲಿಲ್ಲ. ಈಗ ನಾವು 50 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡುತ್ತಿದ್ದೇವೆ.

ಶ್ರೀ ರಮಾನಾಥ ರೈ: ರಾಜ್ಯದಲ್ಲಿ ವಕ್ಫ್ ಮಂಡಳಿಯಲ್ಲಿ ಕೊಡಬೇಕಾದ ಹಣವನ್ನು ಕಳೆದ ವಾರ್ಷಿಕ ವರ್ಷ ಮತ್ತು ಅದರ ಹಿಂದಿನ ವರ್ಷ ಮತ್ತು ಕಳೆದ 5-6 ವರ್ಷಗಳಲ್ಲಿ ಎಷ್ಟೆಷ್ಟು ಕೊಟ್ಟಿದ್ದೀರಿ? ಪ್ರತ್ಯೇಕ ಪ್ರತ್ಯೇಕವಾದ ಮಸೀದಿಗಳಿಗೆ ಎಷ್ಟು ಕೊಟ್ಟಿದ್ದೀರಿ ಎನ್ನುವ ಅಂಕಿಅಂಶ ಕೊಟ್ಟರೆ ಉತ್ತಮ.

ಅಧ್ಯಕ್ಷರು: ಕಳುಹಿಸಿಕೊಡುತ್ತಾರೆ. ಅದನ್ನು ಈಗ ಕೇಳುತ್ತಿದ್ದೀರಲ್ಲಾ. ಅವರಿಗೆ ಡಿಟೇಲ್ಸ್ ಕಳುಹಿಸಿಕೊಡಿ.

ಶ್ರೀ ಆರ್.ರೋಷನ್ ಬೇಗ್: ಕಳುಹಿಸಿಕೊಡುತ್ತೇನೆ.

ಹಾವೇರಿ ಜಿಲ್ಲಾ ಹಿರೇಕೆರೂರು ತಾಲ್ಲೂಕು ರಟ್ಟಿಹಳ್ಳಿ ಬಳಿ ಕುಮಧ್ವತಿ ನದಿಗೆ ಬಾಂದಾರಾದ ನಿರ್ಮಾಣ

ಶ್ರೀ ಯು.ಬಿ.ಬಣಕಾರ್ (ಹಿರೇಕೆರೂರು): ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಹಾವೇರಿ ಜಿಲ್ಲಾ ಹಿರೇಕೇರೂರು ತಾಲ್ಲೂಕು ರಟ್ಟಿಹಳ್ಳಿ ಹತ್ತಿರ ಕುಮದ್ವತಿ ನದಿಗೆ ಕಟ್ಟಲಿರುವ ಬಾಂದಾರಾದ ವಿವರ ನೀಡುವುದು.

ಆ) ಸದರಿ ಯೋಜನೆ ಯಾವ ಹಂತದಲ್ಲಿದೆ.

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು):

ಅ ಮತ್ತು ಆ) ಹಾವೇರಿ ಜಿಲ್ಲೆ ಹಿರೇಕೇರೂರು ತಾಲ್ಲೂಕು ರಟ್ಟಿಹಳ್ಳಿ ಸಮೀಪ ಕುಮದ್ವತಿ ನದಿಗೆ ಅಡ್ಡಲಾಗಿ ಸೇತುವೆಯನ್ನೊಳಗೊಂಡ ಬಾಂದಾರ (ವೆಂಟೆಡ್ ಮಾದರಿಯಲ್ಲಿ) ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದ್ದು ಇದಕ್ಕೆ ಪ್ರಾಥಮಿಕ ತನಿಖಾ ವರದಿಯನ್ನು ಸಿದ್ಧಪಡಿಸಲಾಗಿದೆ. ಅದರಂತೆ ಈ ಯೋಜನೆಗೆ 133.00 ಲಕ್ಷ ರೂಪಾಯಿಗಳ ಅಂದಾಜು ಇದ್ದು, ಇದರಿಂದ 233 ಎಕರೆ ಅಚ್ಚುಕಟ್ಟಿಗೆ ಹಿಂಗಾರು ಹಂಗಾಮಿನಲ್ಲಿ ನೀರನ್ನು ಒದಗಿಸಿ ಅರೆನೀರಾವರಿ ಬೆಳೆ ಬೆಳೆಯಲು ಉದ್ದೇಶಿಸಿದೆ. 1997-98ನೇ ಆಯವ್ಯಯದಲ್ಲಿನ ಇದಕ್ಕೆ ಸಾಂಕೇತಿಕವಾಗಿ ರೂ. 1.00 ಲಕ್ಷಗಳ ಅನುದಾನವನ್ನು ಒದಗಿಸಲಾಗಿದೆ. ಮೇಲ್ನೋಟಕ್ಕೆ ಆರ್ಥಿಕನಾಗಿ ದುಬಾರಿಯಾಗಿ ಕಂಡು ಬಂದಿರುವುದರಿಂದ, ಮೌಲ್ಯಮಾಪನ ಸಮಿತಿ ಮುಂದಿಟ್ಟು ಆರ್ಥಿಕವಾಗಿ ಹಾಗೂ ತಾಂತ್ರಿಕವಾಗಿ ಶಕ್ಯವಾಗಿ ಕಂಡುಬಂದಲ್ಲಿ ಈ ಕಾಮಗಾರಿಯನ್ನು 1998-99ನೇ ವರ್ಷದಲ್ಲಿ ಸೂಕ್ತ ಅನುದಾನದೊಂದಿಗೆ ಕೈಗೆತ್ತಿಕೊಳ್ಳಲು ಉದ್ದೇಶಿಸಿದೆ.

ಶ್ರೀ ಯು.ಬಿ.ಬಣಕಾರ್: ಸುಮಾರು 233 ಎಕರೆ ಹಿಂಗಾರಿ ಹಂಗಾಮಿನಲ್ಲಿ ನೀರು ಒದಗಿಸಿರುವ ಬಾಂದಾರ್‌ಗೆ ಒಂದು ಕೋಟಿ 33 ಲಕ್ಷ ರೂಪಾಯಿಗಳ ಅಂದಾಜುವೆಚ್ಚದಲ್ಲಿ ಯೋಜನೆ ತಯಾರು ಮಾಡಿದ್ದು, ಸುಮಾರು 10-12 ವರ್ಷಗಳಿಂದ ಅದು ಹಾಗೇ ಉಳಿದುಕೊಂಡು ಬರುತ್ತಿದೆ. 1997-98ನೇ ಸಾಲಿಗೆ ಕೇವಲ ಒಂದು ಲಕ್ಷ ರೂಪಾಯಿಗಳನ್ನು ನಿಗದಿ ಮಾಡಿದ್ದು, ಇನ್ನೂವರೆಗೂ ಅಂದರೆ ಸುಮಾರು ಒಂದು ವರ್ಷದಿಂದ ಅದು ಮೌಲ್ಯಮಾಪನ ಸಮಿತಿ ಮುಂದಿದೆ. ಆದ್ದರಿಂದ, ಕೂಡಲೇ ಅದನ್ನು ಇತ್ಯರ್ಥಗೊಳಿಸಿ, 1998-99ನೇ ಸಾಲಿನಲ್ಲಿ ಸರ್ಕಾರ ಈ ಯೋಜನೆಯನ್ನು ಕೈಗೆತ್ತಿಕೊಳ್ಳುತ್ತದೆಯೇ ಎಂದು ಕೇಳಬಯಸುತ್ತೇನೆ.

ಶ್ರೀ ತಿಪ್ಪೇಸ್ವಾಮಿ: ಈ ಕಾಮಗಾರಿ ಇಷ್ಟೊಂದು ತಡವಾಗಲು ಮುಖ್ಯ ಕಾರಣವೆಂದರೆ, ಇದಕ್ಕೆ ಒಂದು ಕೋಟಿ 33 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಬೇಕಾಗುತ್ತದೆಂಬ ಅಂದಾಜಿತ್ತು. ಇದರಿಂದ ನೀರಾವರಿಯಾಗುವುದು 233 ಎಕರೆ ಮಾತ್ರ. ನಾವು ಏನು ಹಣ ಖರ್ಚು ಮಾಡಿದೆವೋ, ಆ ಹಣ ಖರ್ಚು ಮಾಡುವುದಕ್ಕೂ

ನೀರಾವರಿಗೂ ಬಹಳ ವ್ಯತ್ಯಾಸವಿದೆ. ಅದಕ್ಕೆ ನಾವೇ ಮಂಜೂರು ಮಾಡುವುದಕ್ಕಾಗುವುದಿಲ್ಲ. ಏಕೆಂದರೆ, ನಾವು ಲಕ್ಷ ರೂಪಾಯಿ ಏನು ಖರ್ಚು ಮಾಡುತ್ತೇವೆ, ಆ ಹಣಕ್ಕೂ ಈ ನೀರಾವರಿಗೂ ಸಮತೋಲನೆ ಆಗುವುದಿಲ್ಲ. ರಸ್ತೆಗೂ ನಾವು ಹಣ ಖರ್ಚು ಮಾಡುತ್ತೇವೆ. ಈ ರಸ್ತೆಯ ಸದುಪಯೋಗ ಸಮಾಜಕ್ಕೆ, ಜನರಿಗೆ ಆಗುತ್ತದೆನ್ನುವ ಕಾರಣದಿಂದ ಇದನ್ನು ಮಾಡಿಕೊಡಿ ಎನ್ನುವ ಒತ್ತಾಯವನ್ನು ನಾವು ತರುತ್ತಿದ್ದೇವೆ. ಅವರಿಂದ ತಾಂತ್ರಿಕ ಸಲಹೆ ಸಿಕ್ಕ ತಕ್ಷಣ ನಾವು ಇದಕ್ಕೆ ಆದ್ಯತೆ ಕೊಟ್ಟು ಮಾಡಿಕೊಡುತ್ತೇವೆ.

ಶ್ರೀ ಯು.ಬಿ.ಬಣಕಾರ್: ಸುಮಾರು ವರ್ಷಗಳಿಂದ ಇದು ಆ ಸಮಿತಿ ಮುಂದಿದೆ. ದಯವಿಟ್ಟು ಬೇಗನೆ ಇತ್ಯರ್ಥಗೊಳಿಸಿ. ಇದು ಕೇವಲ ಬಾಂದಾರದ ಪ್ರಶ್ನೆಯಲ್ಲ. ರಟ್ಟಿಹಳ್ಳಿ ಏತ ನೀರಾವರಿ ಯೋಜನೆಗೆ ಬಾಂದಾರ ಕಟ್ಟುವುದರಿಂದ ಅನುಕೂಲವಿದೆ. ರಟ್ಟೀಹಳ್ಳಿ ಏತ ನೀರಾವರಿ ಯೋಜನೆಗೆ ತೊಂದರೆ ಬರುತ್ತಿದೆ. ಮಳಿಗೆ ಗ್ರಾಮಸ್ಥರಿಗೆ ಈ ದಾರಿ ಬಿಟ್ಟರೆ ಬೇರೆ ದಾರಿಯಿಲ್ಲ. ಆದ್ದರಿಂದ, ತಾವು ಬಾಂದಾರ ಕಟ್ಟುವಾಗ ಚಕ್ಕಿ ಅದರ ಮೇಲೆ ಹೋಗಲಿಕ್ಕೆ ಏನಾದರೂ ಮಾಡಿ ಈ ಒಂದು ಯೋಜನೆಯನ್ನು ಕೈಗೆತ್ತಿಕೊಳ್ಳಬೇಕೆಂದು ಪುನಃ ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ತಿಪ್ಪೇಸ್ವಾಮಿ: ನಿಮ್ಮ ಸಲಹೆ ಉತ್ತಮವಾಗಿದೆ. ಅದಕ್ಕೆ ನಾನು ಪ್ರಯತ್ನ ಮಾಡುತ್ತೇನೆ.

ಹೊಸದಾಗಿ ರಚಿಸಲ್ಪಟ್ಟ ಜಿಲ್ಲೆಗಳಲ್ಲಿ ಜಿಲ್ಲಾ ಕಛೇರಿಗಳನ್ನು, ತೆರೆಯುವುದು.

7 (4)

ಶ್ರೀ ಡಿ.ಆರ್.ಪಾಟೀಲ್ (ಗದಗ್): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊಸದಾಗಿ, ರಚಿಸಲ್ಪಟ್ಟ ಗದಗ್ ಹಾಗೂ ಇನ್ನಿತರ ಜಿಲ್ಲೆಗಳಲ್ಲಿ ಜಿಲ್ಲಾ ಕಛೇರಿಗಳನ್ನು ಎಂದು ಪ್ರಾರಂಭಿಸಲಾಗುವುದು? ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮಗಳೇನು?

ಆ) ಮುಂದಿನ ಹಣಕಾಸು ವರ್ಷದಿಂದ ಹೊಸ ಜಿಲ್ಲೆಗಳಿಗೆ ಯೋಜನೆ ಹಾಗೂ ಯೋಜನೇತರ ವೆಚ್ಚಗಳಿಗೆ ಪ್ರತ್ಯೇಕ ಅನುದಾನ ಒದಗಿಸಲಾಗುವುದೇ?

ಇ) ಸರ್ಕಾರ ಈ ಮೊದಲು ನೀಡಿದ ಭರವಸೆಯಂತೆ ಏಪ್ರಿಲ್ ಒಂದನೇ ದಿನಾಂಕದಿಂದ ಹೊಸ ಜಿಲ್ಲಾ ಕೇಂದ್ರಗಳಲ್ಲಿ ಜಿಲ್ಲೆಯ ಎಲ್ಲಾ ಕಛೇರಿಗಳನ್ನು ಪ್ರಾರಂಭಿಸಲಾಗುವುದೇ?